

ವರುಣ್ ಚಕ್ರವರ್ತಿ

ಅವರನ್ನು ಖರೀದಿಸಿದ್ದ ರಾಜಸ್ಥಾನ ರಾಯಲ್ಸ್ ಈ ಸಲ ಆ ಬೆಲೆ ತಗ್ಗಿಸಿಕೊಳ್ಳಲೆಂದೇ ಮರುಹರಾಜಿನ ಅವಕಾಶ ಸೃಷ್ಟಿಸಿರಲಿಕ್ಕೂ ಸಾಕು.

ಯಾರ್ಕರ್‌ಗಳು, ರಿವರ್ಸ್ ಸ್ವಿಂಗ್ ಅಂತಿಮ ಓವರ್‌ಗಳಲ್ಲಿ ಉನದ್ಕತ್ ಪ್ರಯೋಗಿಸುವ ಅಸ್ತ್ರಗಳು. ಎಸೆತಗಳ ವೇಗದಲ್ಲೂ ಅವರು ಊಹಾತೀತ ಬದಲಾವಣೆಗಳನ್ನು ಮಾಡಬಲ್ಲರು.

ಇನ್ನು ವರುಣ್ ಚಕ್ರವರ್ತಿ. 12, 19 ವರ್ಷದೊಳಗಿನವರ ತಂಡದಲ್ಲಿ ಆಡಿದಂಥ ಆಟಗಾರನೇ ಅಲ್ಲ. ವಾಸ್ತುಶಿಲ್ಪ ಓದಿಕೊಂಡು, ಮೊದ ಮೊದಲು ಕ್ರಿಕೆಟ್ ವಿಷಯದಲ್ಲಿ ನಿರಾಕರಣೆಗೂ ಒಳಗಾಗಿದ್ದವರು. 13ನೇ ವಯಸ್ಸಿನಿಂದ ಅವರು ಆಟವನ್ನು ಗಂಭೀರವಾಗಿ ಪರಿಗಣಿಸಿದ್ದು. ಕ್ರೊಮ್‌ಬೆಸ್ಟ್ ಕ್ಲಬ್, ಜೂಬಿಲಿ ಕ್ಲಬ್‌ಗಳಲ್ಲಿ ಅವರು ತಮ್ಮ ಸ್ಪಿನ್ ಮಾಂತ್ರಿಕತೆಯನ್ನು ಸಾಣೆಗೆ ಒಡ್ಡಿಕೊಂಡರು. ರೋಬಸ್ಟ್ ಚೆನ್ನೈ ಲೀಗ್ ಕ್ರಿಕೆಟ್‌ನಲ್ಲಿ 8.26ರ ಸರಾಸರಿಯಲ್ಲಿ 31 ವಿಕೆಟ್ ಪಡೆದಾಗ ಅವರ ಮೇಲೆ ಐಪಿಎಲ್ ಫ್ರಾಂಚೈಸಿಗಳ ಕಣ್ಣುಬಿತ್ತು. ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲೂ ಅವರ ಬೌಲಿಂಗ್ ವೈವಿಧ್ಯ ಗಮನಿಸಿದ ಕಣ್ಣುಗಳು ಅಸಂಖ್ಯ. ಆಗ ಅಭ್ಯಾಸದ ಸಂದರ್ಭ ಚೆನ್ನೈ ಸೂಪರ್ ಕಿಂಗ್ಸ್, ಕೋಲ್ಕತ್ತ ನೈಟ್ ರೈಡರ್ಸ್ ಆಟಗಾರರಿಗೆ ಬೌಲಿಂಗ್ ಮಾಡಿದ ವರುಣ್, ಹ್ಯೂ ಎಡ್ಮಿಸನ್ ಕೂಗಿದ ಹರಾಜಿನಲ್ಲಿ ಮೂಲಬೆಲೆ ₹ 20 ಲಕ್ಷದಿಂದ ₹ 8.4 ಕೋಟಿಗೆ ಪಂಜಾಬ್ ತಂಡದ ಪಾಲಾದದ್ದು ಅಚ್ಚರಿಯೇ ಹೌದು.

ಆಫ್ ಬ್ರೇಕ್, ಲೆಗ್ ಬ್ರೇಕ್, ಗೂಗ್ಲಿ, ಚೈನಾ ಮನ್, ಕೇರಂ ಬಾಲ್, ಫ್ಲಿಪರ್ ಎಲ್ಲವನ್ನೂ ಪ್ರಯೋಗಿಸಬಲ್ಲ ಬೌಲರ್ ಅವರೆನ್ನುವುದು ವಿಶೇಷ. ಅಂದಮಾತ್ರಕ್ಕೆ ಅವರನ್ನು ಶ್ರೇಷ್ಠ ಎನ್ನಲಾಗದು. ಅನಿಲ್ ಕುಂಬ್ಳೆ, ಹರಭಜನ್ ಸಿಂಗ್, ಆರ್. ಅಶ್ವಿನ್, ಯಜುವೇಂದ್ರ ಚಹಾಲ್, ಮುತ್ತಯ್ಯ ಮುರಳೀಧರನ್ ಎಲ್ಲರನ್ನೂ ಬೆರೆಸಿದ ಒಬ್ಬನೇ ಬೌಲರ್ ಅವರೆಂದು ಕೆಲವರು ಹೊಗಳಿದರೂ ಅವರ ಸಾಮರ್ಥ್ಯವಿನ್ನೂ ರುಜುವಾತಾಗಬೇಕಿದೆ.

ಎಂಟೇ ವಿಕೆಟ್‌ಗಳನ್ನು ಗಿಟ್ಟಿಸಲು ಆದದ್ದು. 2013ರ ನಂತರ ಅವರು ಯಾವ ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನೂ ಆಡಿಲ್ಲ. 2011ರಿಂದ ದೇಸಿ ಕ್ರಿಕೆಟ್‌ನಲ್ಲಿ ಸ್ಥಾನ ಪಡೆಯಲು ಕೂಡ ಅವರು ತಡಕಾಡಿರುವ ಉದಾಹರಣೆಗಳಿವೆ. 2014ರಲ್ಲಿ ಮೂಳೆ ಮುರಿತದಿಂದ ನೋವುಂಡ ಅವರು, 2015–16ರ ರಣಜಿ ಋತುವಿನಲ್ಲಿ ಮತ್ತೆ ತಮ್ಮ ಕಸುವನ್ನು ರುಜುವಾತು ಪಡಿಸಿದರು. ಐದು ವಿಕೆಟ್‌ಗಳ ನಾಲ್ಕು ಗೊಂಚಲುಗಳು ಸೇರಿದ್ದ 40 ವಿಕೆಟ್‌ಗಳನ್ನು ಆಗ ಅವರು ಕಿತ್ತರು. ಅಷ್ಟೇ ಅಲ್ಲ, ಸೌರಾಷ್ಟ್ರ ಆ ಋತುವಿನಲ್ಲಿ ರಣಜಿ ಫೈನಲ್ ಪ್ರವೇಶಿಸಲು ಕಾರಣ ಆಗಿದ್ದು ವಿಶೇಷ.

2010ರಲ್ಲಿ 19 ವರ್ಷದೊಳಗಿನವರ ಐಸಿಸಿ ವಿಶ್ವಕಪ್ ಪಂದ್ಯಗಳಲ್ಲಿ ತಮ್ಮ ಎಡಗೈ ಮಧ್ಯಮ ವೇಗದ ಎಸೆತಗಳ ವೈವಿಧ್ಯ ತೋರಿ ಗಮನ ಸೆಳೆದ ಅವರು, ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡುವ ಅವಕಾಶ ಗಿಟ್ಟಿಸಿದರು. ಇಂಗ್ಲೆಂಡ್‌ನ ಗ್ರೇಸ್ ರೋಡ್‌ನಲ್ಲಿ ವೆಸ್ಟ್‌ಇಂಡೀಸ್ ವಿರುದ್ಧದ ಪ್ರಥಮ ದರ್ಜೆ ಟೆಸ್ಟ್ ಪಂದ್ಯದಲ್ಲಿ 103 ರನ್ ನೀಡಿ 13 ವಿಕೆಟ್ ಪಡೆದ ಮೇಲೆ ಅವರಿಗೆ ಅಂತರರಾಷ್ಟ್ರೀಯ ಟೆಸ್ಟ್ ಆಡುವ ಒಂದೇ ಅವಕಾಶ ಸಿಕ್ಕಿದ್ದು. ಸೆಂಚೂರಿಯನ್‌ನಲ್ಲಿ ನಡೆದ ಆ ಪಂದ್ಯದಲ್ಲಿ ಜಹೀರ್ ಖಾನ್ ಗಾಯಗೊಂಡ ಕಾರಣ ದಕ್ಷಿಣ ಆಫ್ರಿಕಾ ವಿರುದ್ಧ ಅವರು ಆಡಿದ್ದು. ಒಂದು ವಿಕೆಟ್ ಕೂಡ ಸಿಗಲಿಲ್ಲ.

ಕಳೆದ ಹತ್ತು ದೇಸಿ ಪಂದ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ 17 ವಿಕೆಟ್‌ಗಳನ್ನು ಉನದ್ಕತ್ ಪಡೆದಿದ್ದಾರೆ. ಐಪಿಎಲ್‌ನ ಕಳೆದೆರಡು ಋತುಗಳಲ್ಲಿ ಅವರ ಸಾಧನೆ ಗಮನಾರ್ಹ. ಒಟ್ಟು 27 ಪಂದ್ಯಗಳಿಂದ 35 ವಿಕೆಟ್‌ಗಳನ್ನು ಕಿತ್ತಿರುವುದು ಅಗ್ಗಳಿಕೆ. 2017ರಲ್ಲಂತೂ 12 ಪಂದ್ಯಗಳಿಂದ 24 ವಿಕೆಟ್ ಪಡೆದು, ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದರು. ಹೋದ ಸಲ ₹ 11 ಕೋಟಿಗೂ ಹೆಚ್ಚು ಮೌಲ್ಯ ಕೊಟ್ಟು

ಕಳೆದ ಐಪಿಎಲ್‌ನಲ್ಲಿ ಚೆನ್ನಾಗಿ ಆಡಿಯೂ ಹರಾಜಾಗದ ಮನೋಜ್ ತಿವಾರಿ ಈಗ ಆಕಾಶ ನೋಡುತ್ತಿರುವುದರಲ್ಲೂ ಅರ್ಥವಿದೆ. 'ಒಂದು ವೇಳೆ ಕಪಿಲ್ ದೇವ್ ಈಗ ಆಡುತ್ತಾ ಇದ್ದಿದ್ದರೆ ₹ 25 ಕೋಟಿಗೆ ಹರಾಜಾಗುತ್ತಿದ್ದರು' ಎಂದು ಸುನಿಲ್ ಗಾವಸ್ಕರ್ ಹೇಳಿರುವುದರಲ್ಲೂ ಸತ್ಯವಿದೆಯೇನೋ ಎಂದುಕೊಳ್ಳಲೂ ಕಾರಣವಿದೆ.

2008ರಲ್ಲಿ ಮೊದಲು ಐಪಿಎಲ್ ಶುರುವಾದಾಗ ದೋನಿ ಹರಾಜಾದದ್ದು ₹ 9.5 ಕೋಟಿಗೆ. ಮರುವರ್ಷ ಇಂಗ್ಲೆಂಡ್‌ನ ಆ್ಯಂಡ್ರೂ ಫ್ಲಿಂಟಾಫ್ ಅದಕ್ಕಿಂತ ಇನ್ನೂ ಅರ್ಧ ಕೋಟಿ ರೂಪಾಯಿ ಹೆಚ್ಚು ಬೆಲೆಗೆ ಬಿಕರಿಯಾಗಿದ್ದರು. ಅದೇ ದೇಶದ ಕೆವಿನ್ ಪೀಟರ್ಸನ್ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು 2009ರಲ್ಲೇ ₹ 9.8 ಕೋಟಿಗೆ ಖರೀದಿಸಿತ್ತು. 2012 ಆಗುವಷ್ಟರಲ್ಲಿ ರವೀಂದ್ರ ಜಡೇಜಾ ಬೆಲೆ ₹ 12 ಕೋಟಿ ಆಗಿತ್ತು. ಅದಕ್ಕೂ ಹಿಂದಿನ ವರ್ಷ ರೋಹಿತ್ ಶರ್ಮ ಕೂಡ ಅಷ್ಟೇ ಬೆಲೆಗೆ ಹರಾಜಾದದ್ದು. ಎಲ್ಲಾ ಲೆಕ್ಕಗಳನ್ನೂ ಚಿಂದಿ ಮಾಡಿದ ಯುವರಾಜ್ ಸಿಂಗ್ 2015ರಲ್ಲಿ ₹ 16 ಕೋಟಿ ಬೆಲೆ ಪಡೆದದ್ದು ದೊಡ್ಡ ಸುದ್ದಿ. ಅದನ್ನೂ ಮೀರಿಸಿದ್ದು ವಿರಾಟ್ ಕೊಹ್ಲಿ; ಅದೇ ವರ್ಷ ₹ 17 ಕೋಟಿ ಪಡೆಯುವ ಮೂಲಕ. ಯೂಸುಫ್ ಪಠಾಣ್, ಇರ್ಫಾನ್ ಪಠಾಣ್, ಶೇನ್ ವಾಟ್ಸನ್, ರಾಬಿನ್ ಉತ್ತಪ್ಪ ದಿನೇಶ್ ಕಾರ್ತಿಕ್ ಇವರೆಲ್ಲ ಆಲ್‌ರೌಂಡ್ ಸಾಮರ್ಥ್ಯದ ಕಾರಣಕ್ಕೆ (ವಿಕೆಟ್ ಕೀಪಿಂಗ್ ಅನ್ನೂ ಆಲ್‌ರೌಂಡ್ ವ್ಯಾಪ್ತಿಗೇ ತರುವುದು ಚುಟುಕು ಕ್ರಿಕೆಟ್‌ನಲ್ಲಿ ಇದೆ) ದೊಡ್ಡ ಮೊತ್ತಕ್ಕೆ ಹರಾಜಾದವರು. ಈಗ ಉನದ್ಕತ್, ವರುಣ್ ಬೌಲಿಂಗ್ ಬಲದಿಂದ ದೊಡ್ಡ ಹಣ ಪಡೆಯುತ್ತಿರುವುದು ಆಸಕ್ತಿಕರ.

2015ರಲ್ಲೇ ಭಾರತದ ಜಿಡಿಪಿಗೆ 1500 ಕೋಟಿ ರೂಪಾಯಿ ಆದಾಯದ ಕಾಣ್ಕೆ ಸಲ್ಲಿಸಿದ ಐಪಿಎಲ್ ಈಗ 'ಬ್ರಾಂಡ್ ಐಪಿಎಲ್' ಎಂದೆನಿಸಿರುವುದು ಹೇಗೆ ಎನ್ನುವ ಅರ್ಥಶಾಸ್ತ್ರವೇ ಅಧ್ಯಯನಯೋಗ್ಯ.